2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 9/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ಕಾಂತರಾಜ | | ಪಿಡಬ್ಲೂ - 07 |
| ತಂದೆಯ ಹೆಸರು | - ರಾಜಪ್ಪ | | ಸಿಡಬ್ಲೂ - 16 |
| ವಯಸ್ಸು | - 45 ವರ್ಷ | | |
| ಉದ್ಯೋಗ | - ರೆವೆನ್ಯೂ ಇನ್ಸಪೆಕ್ಟರ್ | | |
| ವಾಸ ಸ್ಥಳ | - ತರೀಕೆರೆ | | |

ದಿನಾಂಕಃ **27.11.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತಳನ್ನು ನೋಡಿದ್ದೇನೆ.
2. 2019 ನೇ ಸಾಲಿನಲ್ಲಿ ತರೀಕೆರೆ ಪೋಲೀಸರು ನಮ್ಮ ಕಚೇರಿಗೆ ಬಂದಿದ್ದರು. ಸರ್ಕಾರಿ ನೌಕರರು ಸಾಕ್ಷಿಯಾಗಿ ಬರಬೇಕು ಎಂದು ತಾಲ್ಲೂಕು ತಹಸಿಲ್ದಾರರನ್ನು ಕೇಳಿದರು. ತಹಸಿಲ್ದಾರರು ನನಗೆ ಹಾಗೂ ಚಾಸಾ.17 ರವರಿಗೆ ತನಿಖಾಧಿಕಾರಿಗೆ ಸಹಕರಿಸುವಂತೆ ಸೂಚಿಸಿದರು.
3. ನಂತರ ಪೋಲೀಸರು ನಮ್ಮನ್ನು ತರೀಕೆರೆಯ ಭದ್ರಾ ಮೇಲ್ದಂಡೆಯ ಒಂದು ಚಾನಲ್ ಹತ್ತಿರ ಕರೆದುಕೊಂಡು ಹೋದರು. ಆಗ ನಮ್ಮ ಜೊತೆ ಆರೋಪಿತಳು ಹಾಗೂ ಪೋಲೀಸರು ಇದ್ದರು. ಆರೋಪಿತಳು ಮಗುವನ್ನು ಎಸೆದ ಸ್ಥಳ ಎಂದು ಘಟನಾ ಸ್ಥಳ ತೋರಿಸಿದಳು. ಪೋಲೀಸರು ಬೆಳಗಿನ ಸಮಯದಲ್ಲಿ ಪಂಚನಾಮೆ ಕ್ರಮ ಜರುಗಿಸಿದರು. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.8 ಎಂದು ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಸಂಗ್ರಹಿಸಿದ ಭಾವಚಿತ್ರಗಳನ್ನು ಈಗ

ನೋಡುತ್ತಿದ್ದು ಅವುಗಳನ್ನು ನಿಪಿ.9 ಮತ್ತು 10 ಎಂದು ಗುರುತಿಸಲಾಯಿತು.

4. ಸದರಿ ಸೇತುವೆ ಹತ್ತಿರ ನಾನು ಸಹಿ ಮಾಡಿದ ನೋಟೀಸನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.11 ಎಂದು ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು.

5. ಅಲ್ಲಿಂದ ಪೋಲೀಸರು ನಮ್ಮನ್ನು ಸುಮಾರು 3 ಕಿಮೀ ದೂರದ ಭದ್ರಾ ಮೇಲ್ದಂಡೆಯ ಪಂಪ್ ಹೌಸ್ ಹತ್ತಿರ ಕರೆದುಕೊಂಡು ಹೋಗಿ ಮಗುವಿನ ಮೃತದೇಹ ಪತ್ತೆಯಾದ ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿದರು. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.12 ಎಂದು ಸಾಕ್ಷಿಯ ಸಹಿಯನ್ನು ನಿಪಿ.12(ಎ) ಎಂದು ಗುರುತಿಸಲಾಯಿತು. ಪಂಪ್ ಹೌಸ್ ಬಳಿ ಸಂಗ್ರಹಿಸಿದ ಭಾವಚಿತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.13 ಎಂದು ಗುರುತಿಸಲಾಯಿತು. ನಿಪಿ.13 ರಲ್ಲಿ ಕಂಡು ಬರುವ ಮಹಿಳೆ ಆರೋಪಿಯ ಅತ್ತೆ ಇರಬಹುದು.

<u>ಪಾಟೀ ಸವಾಲು: ಶ್ರೀ ಆರ್.ಎಸ್., ವಕೀಲರಿಂದ ಆರೋಪಿ ಪರವಾಗಿ</u>

6. ಪೋಲೀಸರು ತಹಸಿಲ್ದಾರರಿಗೆ ಲಿಖಿತ ಮನವಿ ಸಲ್ಲಿಸಿದ್ದರು. ತಹಸಿಲ್ದಾರರು ನಮಗೆ ಲಿಖಿತ ಆದೇಶ ನೀಡಿರಲಿಲ್ಲ.

7. ನಾನು ಸ್ಥಳಕ್ಕೆ ಪೋಲೀಸ್ ಜೀಪಿನಲ್ಲಿ ಹೋದೆವು. ಆರೋಪಿ ಘಟನಾ ಸ್ಥಳದಲ್ಲಿ ಒಬ್ಬಳೇ ಇದ್ದಳು. ನಿಪಿ.8 ಹಾಗೂ ನಿಪಿ.12 ರ ಮಹಜರಿನಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ಅದನ್ನು ಬರೆದವರ ಹೆಸರು ಹೇಳಲಾಗುವುದಿಲ್ಲ. ನಿಪಿ.8 ಮತ್ತು 12 ರಲ್ಲಿ ಪೋಲೀಸರು ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.9, 10 ಮತ್ತು 13 ರ ಭಾವಚಿತ್ರದಲ್ಲಿ ಮಗು ಇಲ್ಲ. ನನಗೆ ಈ

ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲದಿದ್ದರೂ ಪೋಲೀಸರ ಮಾತಿನ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನಿಪಿ.8, 11 ಮತ್ತು 12ರ ದಾಖಲೆಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಆರೋಪಿತಳು ಸ್ಥಳ ತೋರಿಸಿದ್ದಾಳೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ